<u>ಅಸಲು ದಾವಾ ಸಂಖ್ಯೆ: **-123/2024**</u> ಪಿ.ಡಬ್ಲ್ಯೂ.**:-3**

ದಿನಾಂಕಃ **07.03.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನ್ನ ತಂದೆಯ ಹೆಸರು ಶಾಂತವೀರನಾಯ್ಕ. ನಾನು 5-6 ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಸ್ವಲ್ಪ ಮಟ್ಟಿಗೆ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು 2 ನೇ ವಾದಿ ಹೇಳಿ ಬರೆಸಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಕುರುವ ತಾಂಡ ಗ್ರಾಮದ ವಾಸಿ. ಕುರುವ ತಾಂಡ ಮತ್ತು ಸೇವಾಲಾಲ್ ನಗರ ಎರಡು ಬೇರೆ. ಕುರುವ ತಾಂಡ ಮತ್ತು ಸೇವಾಲಾಲ್ ನಗರ ಎರಡು ಬೇರೆ ಬೇರೆ ಗ್ರಾಮಗಳು ಎಂದರೆ ಸರಿಯಲ್ಲ. ಕುರುವ ತಾಂಡದಿಂದ ಬೀಜೋಗಟ್ಟೆ ಗ್ರಾಮಕ್ಕೆ ಸುಮಾರು 1 ಕಿ.ಮೀ. ಅಂತರವಿರುತ್ತದೆ. ನನ್ನ ಅಜ್ಜನ ಹೆಸರು ಅರ್ಜ್ಯಾನಾಯ್ಕ. ಗೌರಿಬಾಯಿ ನಮ್ಮ ಕುಟುಂಬದವರು. ಗೌರಿಬಾಯಿ ಗಂಡನ ಹೆಸರು ಚಂದ್ರನಾಯ್ಕ. ನಮ್ಮ ಅಜ್ಜ ಮತ್ತು ಚಂದ್ರನಾಯ್ಕ ಅಣ್ಣ ತಮ್ಮಂದಿರಾಗಬೇಕು. ಚಂದ್ರನಾಯ್ಕರವರಿಗೆ ಇಬ್ಬರು ಮಕ್ಕಳು ಅಂದರೆ ಹನುಮಂತನಾಯ್ಕ ಮತ್ತು ಬಾಬನಾಯ್ಕ. ಗೌರಿ ಬಾಯಿ ಮತ್ತು ಚಂದ್ರ ನಾಯ್ಕರವರು ಈಗ ಮರಣ ಹೊಂದಿರುತ್ತಾರೆ. ಹನುಮಂತನಾಯ್ಕ ಈಗ ತೀರಿಕೊಂಡಿರುತ್ತಾರೆ. ಹನುಮಂತನಾಯ್ಕನ ಹೆಂಡತಿಯ ಹೆಸರು ಪದ್ಮಿಬಾಯಿ. ಬಾಬನಾಯ್ಕ ಮತ್ತು ಪದ್ಮಿಬಾಯಿ ಈಗ ಜೀವಂತವಾಗಿದ್ದಾರೆ. ಬಾಬನಾಯ್ಕ ಮತ್ತು ಪದ್ಮಿಬಾಯಿರವರು ಜಂಟಿಯಾಗಿ ಸರ್ವೇ ನಂ.18 ರಲ್ಲಿ 8 ಎಕರೆ 14 ಗುಂಟೆ ಜಮೀನಿನ ಮಾಲೀಕರು ಮತ್ತು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸರ್ವೇ ನಂ.18 ರಲ್ಲಿ ನನ್ನ ತಂದೆಗೆ

ಮತ್ತು ನನ್ನ  ಅಕ್ಕ ತಂಗಿಯರಿಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿ. ಸಾಕ್ಷಿಗೆ ನೀವು ಸರ್ವೇ ನಂ.18 ರಲ್ಲಿ ಯಾವುದೇ ಸ್ವಾಧೀನಾನುಭವದಲಿಲ್ಲ ಎಂದರೆ ಸಾಕ್ಷಿಯು ನಾವು ಗೌರಿ ಬಾಯಿರವರ ವಾರಸುದಾರರು ಅವರ ಹೆಸರಿನಲ್ಲಿರುವ 8 ಎಕರೆ 14 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದೇವೆ ಎಂದು ನುಡಿಯುತ್ತಾರೆ.

ನಿಪಿ-8 ರ ಕಲಂ ನಂ.12 ರಲ್ಲಿ ನನ್ನ ಹೆಸರು ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಗೌರಿಬಾಯಿಯ ವಾರಸುದಾರರಾಗಿ ನಾವು ಸ್ವಾಧೀನದಲ್ಲಿದ್ದೇವೆ ಮತ್ತು ನಮ್ಮ ದೊಡ್ಡಪ್ಪರಾದ ಲಚ್ಕಿರಿನಾಯ್ಕು ಮತ್ತು ಪದ್ಮಿಬಾಯಿ ರವರ ಹೆಸರು ನಮೂದಾಗಿದೆ ಎಂದು ನುಡಿಯುತ್ತಾರೆ. ನಿಪಿ-8 ರ ಪಹಣಿಯ ಪ್ರಕಾರ ಲಚ್ಕಿರಿನಾಯ್ಕುರವರು ಸರ್ವೇ ನಂ.18 ರಲ್ಲಿ 28 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದ್ದು ಆ ಪ್ರಕಾರ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಗೌರಿ ಬಾಯಿರವರಿಗೆ ಸರ್ವೇ ನಂ.18 ರಲ್ಲಿ 8 ಎಕರೆ 14 ಗುಂಟೆ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ 8 ಎಕರೆ 14 ಗುಂಟೆ ಜಮೀನಿಗೆ ಚಕ್ಕುಬಂಧಿ ನನಗೆ ಗೊತ್ತಿಲ್ಲ. ವಾದಿಗೆ ಸರ್ವೇ ನಂ.18 ರಲ್ಲಿ 1 ಎಕರೆ 32 ಗುಂಟೆ ಜಮಿನು ಇರುತ್ತದೆ ಅದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ಭೀಮಪ್ಪರೆಡ್ಡಿರವರ ಜಮೀನು, ಪಶ್ಚಿಮಕ್ಕೆ  ಹಳ್ಳ  ಮತ್ತು ಕುರುವ ಗಡಿ, ಉತ್ತರಕ್ಕೆ ಲಚ್ಕಿರಿನಾಯ್ಕುರವರ ಜಮೀನು, ದಕ್ಷಿಣಕ್ಕೆ ಬಸಪ್ಪರೆಡ್ಡಿರವರ ಜಮೀನು. ದಾವಾ ಆಸ್ತಿ ವಾದಿಗಳಿಗೆ ಹೇಗೆ ಬಂತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗೌರಿಬಾಯಿರವರ ವಾರಸುದಾರರು ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ಗೌರಿಬಾಯಿರವರ ವಾರಸುದಾರರು ಜೀವಂತ ಇದ್ದಾಗ ಅವರಿಗೆ ಸೇರಿದ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಗೌರಿಬಾಯಿರವರಿಗೆ  ನಾವು  ವಾರಸುದಾರರು ಎಂದು ತೋರಿಸಲು ವಂಶವೃಕ್ಷವನ್ನು  ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ಗೌರಿಬಾಯಿಯ ವಾರಸುದಾರರು ಅಲ್ಲ ಮತ್ತು ಸ್ವಾಧೀನಾನುಭವದಲ್ಲಿ ಇಲ್ಲದಿದ್ದರೂ ಸಹ  ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿರವರು ಗೌರಿಬಾಯಿಗೆ ಸೇರಿದ ಆಸ್ತಿಯನ್ನು ನಿಮ್ಮ ಹೆಸರಿಗೆ ಮಾಡಿಸಿಕೊಡಿಸುತ್ತೇನೆ

ಎಂದು ಹೇಳಿದ್ದರಿಂದ ಅವರ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.